# ಅಲ್ಲಿಯೂ ಇದೆ ನಮ್ಮನೆ ಹೋಗಲ್ಲಾಗದು ಸುಮ್ಮನೆ



ಮನುಷ್ಯರ ಮುಂದಿನ ವಾಸಸ್ಥಾನ ಯಾವುದು ಎನ್ನುವ ಕುತೂಹಲದ ಕಣ್ಣುಗಳು ಬಾಹ್ಯಾಕಾಶದತ್ತ ನೆಟ್ಟಾಗ, ಕಣ್ಣೆದುರು ಮೊದಲು ಬರುವುದು ಮಂಗಳ. ಆದರೆ, ಈಗ ವಿಜ್ಞಾನಿಗಳೆದುರು ಹೊಸ ಸಾಧ್ಯತೆಯೊಂದು ತೆರೆದುಕೊಂಡಿದೆ. ಮಂಗಳ ಮತ್ತು ಗುರು ಗ್ರಹಗಳ ನಡುವಿನ ಕ್ಷುದ್ರಗ್ರಹ 'ಸೀರಿಸ್'ಗೆ ಹೊಸ ವರ್ಗೀಕರಣ ನೀತಿಯಲ್ಲಿ 'ಕುಬ್ಜ ಗ್ರಹ' ಎನ್ನುವ ಬಡ್ತಿ ದೊರೆತಿದೆ. ಈ ಬದಲಾವಣೆಯೇ ಮನುಷ್ಯನ ಹೊಸ ನೆಲೆ 'ಸೀರಿಸ್' ಆಗಬಾರದೇಕೆ ಎನ್ನುವ ಪ್ರಶ್ನೆಗೆ ಕಾರಣವಾಗಿದೆ. 'ಸೀರಿಸ್' ಅನ್ನು ಮನುಷ್ಯರ ಕಾಲನಿಯಾಗಿಸುವ ಕನಸು ಕಾಣುವಲ್ಲಿ ಭಾರತೀಯ ಸಂಜಾತ ವಿಜ್ಞಾನಿ, ಫ್ಲಾರಿಡಾ ಇನ್‌ಸ್ಟಿಟ್ಯೂಟ್‌ನ ಡಾ.ಮನಸ್ವಿ ಲಿಂಗಂ ಅವರ ದೊಡ್ಡ ಕೊಡುಗೆಯಿದೆ. ಮಂಗಳನಲ್ಲಿ ನೆಲೆ ಕಂಡುಕೊಳ್ಳುವ ಯೋಚನೆಗೆ ಅಲ್ಪವಿರಾಮ ನೀಡಿ, 'ಸೀರಿಸ್'ನತ್ತ ವಿಜ್ಞಾನಲೋಕದ ಗಮನಹರಿದಿದೆ. ಈ ಬದಲಾದ 'ನೆಲೆ ನೋಟ'ದ ವಿಶ್ಲೇಷಣೆ, ಸ್ವಾರಸ್ಯಕರ ಕಥೆಯಂತೆಯೂ ಕಾಣಿಸುತ್ತದೆ.

■ ಸುಧೀಂದ್ರ ಹಾಲ್ದೊಡ್ಡೇರಿ